**Misc**: 3/2022

ಆರ್ ಡಬ್ಲ್ಯೂ-1

<u>ಸಾಕ್ಷಿಯನ್ನು ದಿಃ 15.09.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು ಎದುರುದಾರರ ಪರ ಶ್ರೀಮತಿ ಎಸ್ ಟಿ ಆರ್ ವಕೀಲರಿಂದಃ</u>**

1937 ರ ವಿಭಾಗ ಪತ್ರದ ಪ್ರಕಾರ ನಮ್ಮ ಕುಟುಂಬಕ್ಕೆ ಒಟ್ಟು 17 ಸರ್ವೆ ನಂಬರ್ ನಲ್ಲಿ ಜಮೀನುಗಳು ಇದ್ದವು . ಸಾಕ್ಷಿಯು ಮುಂದುವರೆದು ಒಟ್ಟು ಜಮೀನುಗಳ ಬಗ್ಗೆ ಸರಿಯಾಗಿ ಗೊತ್ತಿಲ್ಲ ಎಂದು ತಿಳಿಸುತ್ತಾರೆ. ಈ ಪ್ರಕರಣದಲ್ಲಿರುವ ಜಮೀನುಗಳಲ್ಲಿ ಸರ್ವೆ ನಂ.6 ರಲ್ಲಿ 2 ಹಿಸ್ಸೆಗಳಾಗಿದ್ದು ಸರ್ವೆ ನಂ.6/1 ಮತ್ತು ಸರ್ವೆ ನಂ.6/2 ಆಗಿರುತ್ತವೆ. ಸರ್ವೆ ನಂ. 80 ರಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲ. ಸರ್ವೆ ನಂ.80 ತಿಮ್ಮೇಗೌಡರವರಿಗೆ ಸಂಬಂಧಪಟ್ಟಿದೆ. ಸರ್ವೆ ನಂ.81 ರಲ್ಲಿ ನಮ್ಮ ಭಾಗಕ್ಕೆ 2 ಎಕರೆ 20 ಗುಂಟೆ ಬಂದಿದೆ. 1937 ವಿಭಾಗದ ಪ್ರಕಾರ ಸರ್ವೆ ನಂ.6, 80 ಮತ್ತು 81 ಈ ಮೂರು ಜಮೀನುಗಳ ಪೈಕಿ ನಮ್ಮ ಪಾಲಿಗೆ 2 ಎಕರೆ 20 ಗುಂಟೆ ಬಂದಿದೆ. ಉಳಿದ 8 ಎಕರೆ 20 ಗುಂಟೆ ಜಮೀನು ವಾದಿಯರ ಕುಟುಂಬಕ್ಕೆ ಬಂದಿದೆ. ಸರ್ವೆ ನಂ.80 ಮತ್ತು 81 ರಲ್ಲಿ ಯಾವುದೇ ಹಿಸ್ಸೆಯಾಗಿಲ್ಲ ಸರ್ವೆ ನಂ.81 ರಲ್ಲಿ ನಮಗೆ ಜಮೀನು ಇದ್ದು ಜಂಟಿ ಪಹಣಿ ಬರುತ್ತಿದ್ದೆ . ಸರ್ವೆ ನಂ.81 ನಮಗೆ ಮತ್ತು ವಾದಿಯರಿಗೆ ಜಂಟಿಯಾಗಿ ಖಾತೆ ಬರುತ್ತಿದ್ದೆ ಅನ್ನುವುದು ನಿಜ. ಪಹಣಿಗಳು ಪ್ರಾರಂಭವಾದಾಗಿನಿಂದ ಸರ್ವೆ ನಂ.81 ಜಂಟಿಯಾಗಿ ಬರುತ್ತಿದೆ.

ಸಾಕ್ಷಿಗೆ 10 ಪೋಟೋಗಳನ್ನು ತೋರಿಸಿ ಇದರಲ್ಲಿ ಕಾಣುವ ಜಮೀನು ಯಾರದು ಎಂದು ಪ್ರಶ್ನೆ ಮಾಡಿದ್ದು ಸದರಿ ಪ್ರಶ್ನೆಯು ಈ ಪ್ರಕರಣದ ವ್ಯಾಪ್ತಿಗೆ ಒಳಪಡುವುದಿಲ್ಲ. ಏಕೆಂದರೆ ಅದು ಜಮೀನಿನ ಗುರುತು ಅಥವಾ ಸ್ವಾದೀನಕ್ಕೆ ಸಂಬಂಧಪಡುತ್ತದೆ. ಸದರಿ ಪ್ರಶ್ನೆ ಮೂಲ ದಾವೆಯ ಮೇಲೆ ಪರಿಣಾಮ ಬೀರುವುದರಿಂದ ಅಲ್ಲದೆ ಈ ಪ್ರಕರಣಕ್ಕೆ

ಸಮಂಜಸವಲ್ಲದ್ದರಿಂದ ಪ್ರಶ್ನೆಯನ್ನು ತಳ್ಳಿ ಹಾಕಲಾಯಿತು.

ಸದರಿ ಜಮೀನಿನಲ್ಲಿ ಮರಗಳು ಇರುತ್ತವೆ. ಸದರಿ ಜಮೀನಿನಲ್ಲಿ ಗಂಧದ ಮರಗಳು ಇವೆ ಎಂದರೆ ಸರಿಯಲ್ಲ. ಸಾಕ್ಷಿ ತೇಗದ ಮರಗಳು ಇವೆ ಎಂದು ಹೇಳುತ್ತಾರೆ. ಸಾಕ್ಷಿಗೆ ತೇಗದ ಮರಗಳು ಎಷ್ಟು ಇವೆ ಎಂದು ಪ್ರಶ್ನೆ ಕೇಳಿದ್ದು ಈ ಪ್ರಶ್ನೆ ಈ ಪ್ರಕರಣಕ್ಕೆ ಯಾವುದೇ ರೀತಿಯಲ್ಲಿ ಸಂಬಂಧಪಡುವುದಿಲ್ಲ. ಆದ್ದರಿಂದ  ಮೇಲೆ ಹೇಳಿದಂತೆ ಇಂಥಹ ಪ್ರಶ್ನೆಗಳು ಮೂಲ ದಾವೆಯ ಮೇಲೆ ಪರಿಣಾಮ ಬೀರುವುದರಿಂದ  ಈ  ಪ್ರಶ್ನೆಯನ್ನು ಸಹ ತಳ್ಳಿಹಾಕಲಾಯಿತು.

ಓಎಸ್ 15/2016 ದಾವೆ ಚಾಲ್ತಿಯಲ್ಲಿರುವಾಗ ಮತ್ತು ಸದರಿ ದಾವೆಯಲ್ಲಿ ದಾವಾ ಸ್ವತ್ತನ್ನು ಮರಾಟ ಅಥವಾ ಪರಭಾರೆ ಮಾಡಬಾರದು ಎಂದುಪ್ರತಿಬಂಧಕಾಜ್ಞೆ ಆದೇಶ ಇದ್ದರೂ ಸಹ 4 ನೇ ಎದುರುದಾರ ಪಿ ಬಿ ರಂಗನಾಥ್ ಮೃತ ಪಟ್ಟ ನಂತರ ಸದರಿ ಆದೇಶವನ್ನು ಉಲ್ಲಂಘಿಸಿ ಕಾನೂನು ಬಾಹಿರವಾಗಿ ನಿಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೀರಿ ಎಂದರೆ ಸಾಕ್ಷಿ ಪೌತಿ ಖಾತೆ ಮಾಡಿಸಿಕೊಂಡಿದ್ದೇವೆ ಎಂದು ಹೇಳುತ್ತಾರೆ. ನನ್ನ ಚಿಕ್ಕಪ್ಪ ಮೃತ ಪಟ್ಟ ಸಂದರ್ಭದಲ್ಲಿ ದಾವಾ ಸ್ವತ್ತಿನ ಖಾತೆ ಪಹಣಿ ಪಿ ಬಿ ರಂಗನಾಥ್ ಸುಬ್ಬಮ್ಮ ಮತ್ತು ಪಿ ಆರ್ ತಿಮ್ಮೇಗೌಡ ರವರ ಹೆಸರಿನಲ್ಲಿ ಜಂಟಿ ಖಾತೆ ಇತ್ತು. ಪಿ ಬಿ ರಂಗನಾಥ್ ಗೆ ನಾವು ಮೊದಲನೇ ದರ್ಜೆ ವಾರಸುದಾರರು ಎಂದರೆ ಸರಿ. ಸುಬ್ಬಮ್ಮ ಜೀವಂತ ಇರುವಾಗಲೇ ಆಕೆಯ ವಾರಸುದಾರರು ಎಂದು ನಾವು ಸುಳ್ಳು ಹೇಳಿ ದಾವಾ ಸ್ವತ್ತಿನ ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ಸುಳ್ಳು. ಚಿಕ್ಕಪ್ಪ ಪಿ ಬಿ ರಂಗನಾಥ್ ಮತ್ತು ನನ್ನ ತಾಯಿ ಸುಬ್ಬಮ್ಮ ಇವರ ಹೆಸರಿಗೆ ಇದ್ದ ಜಮೀನನ್ನು ಒಂದೇ ಆದೇಶದಡಿ ನಮ್ಮ ಹೆಸರಿಗೆ ಖಾತೆ  ಬದಲಾವಣೆ ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ.81 ರ

ಜಮೀನಿನ ಖಾತೆಯನ್ನು ನನ್ನ ತಾಯಿಯ ಹೆಸರಿಂದ ಪೌತಿ ವಾರಸನಾತೆಯಿಂದ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇವೆ. ನನ್ನ ತಾಯಿ ಸುಬ್ಬಮ್ಮ ಮತ್ತು ಚಿಕ್ಕಪ್ಪ ರಂಗನಾಥ್ ಯಾವಾಗ ಮರಣ ಹೊಂದಿದ್ದಾರೆ ಎಂದು ನೆನಪಿಲ್ಲ. ಅವರಿಬ್ಬರಲ್ಲಿ ನನ್ನ ತಾಯಿ ಸುಬ್ಬಮ್ಮ ಮೊದಲು ಮೃತಪಟ್ಟಿದ್ದಾರೆ. ನನ್ನ ತಾಯಿ ಮೃತ ಪಟ್ಟ 3-4 ವರ್ಷಗಳ ನಂತರ ನನ್ನ ಚಿಕ್ಕಪ್ಪ ರಂಗನಾಥ್ ಮೃತ ಪಟ್ಟಿರುತ್ತಾರೆ. ನನ್ನತಾಯಿ ಮೃತ ಪಟ್ಟ ನಂತರ ಅವರ ಹೆಸರಿನಲ್ಲಿದ್ದ ಜಮೀನು ಖಾತೆ ಮಾಡಲು ನಾವು ಅರ್ಜಿ ಸಲ್ಲಿಸಿರಲಿಲ್ಲ . ನನ್ನ ಚಿಕ್ಕಪ್ಪ ಪಿ ಬಿ ರಂಗನಾಥ್ ಮೃತ ಪಟ್ಟ ನಂತರ ಆತನ ಹೆಸರಿಗಿದ್ದ ಜಮೀನು ನಮ್ಮ ಹೆಸರಿಗೆ ಖಾತೆ ಮಾಡಲು ನಾವು ಅರ್ಜಿ ಸಲ್ಲಿಸಿಲ್ಲ ಆದರೆ ಪೌತಿವಾರಸು ಮೇರೆಗೆ ಆತನ ಹೆಂಡತಿಗೆ ಖಾತೆಯಾಗಿದೆ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು)**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.